■ ವಿಶಾಖ ಎನ್.



# ಬುದ್ಧನ ಪ್ರತಿಮೆ ಮೇಲೆ ಪಾ.ರಂಜಿತ್ ಮಗು

‘ವಿಕ್ಟಿಂ – ಹೂ ಈಸ್ ನೆಕ್ಸ್ಟ್?’ ಎಂಬ ಕಥಾಗುಚ್ಛದ ಸಿನಿಮಾ ತಮಿಳಿನಲ್ಲಿ ತೆರೆಕಂಡಿತು. ಅದರಲ್ಲಿನ ಒಂದು ಕಥೆ ‘ಧಮ್ಮಂ’. ಅದರ ಒಂದು ದೃಶ್ಯ ಹೀಗಿದೆ: ಕೇಮಾ ಎಂಬ ಪುಟಾಣಿ ಹುಡುಗಿ ಆಡುತ್ತಿದ್ದಾಳೆ. ಹಾಗೆ ಆಡುತ್ತಲೇ ಅವಳು ರುಂಡವಿಲ್ಲದ ಬುದ್ಧನ ಪ್ರತಿಮೆಯ ಮೇಲೇರುತ್ತಾಳೆ. ಅದರ ಭುಜದ ಮೇಲೆ ಕೂತು ತಾನು ಹಾರುವ ಭಂಗಿಯಲ್ಲಿ ಸುಖಿಸುತ್ತಾಳೆ. ಇದನ್ನು ನೋಡುವ, ಹೊಲದಲ್ಲಿ ಕೆಲಸ ಮಾಡುವ ಅವಳ ತಂದೆ ಗುಣ, ‘ಅದು ದೇವರು. ಅದರ ಮೇಲೆ ಕೂರಬಾರದು’ ಎನ್ನುತ್ತಾನೆ. ‘ದೇವರೇ ಇಲ್ಲ ಅಂತ ಅಲ್ಲವಾ ಬುದ್ಧ ಹೇಳಿದ್ದು. ನೀನು ಈಗ ಅವನನ್ನೇ ದೇವರೆನ್ನುತ್ತಿರುವೆಯಲ್ಲ’ ಎಂದು ಮಗಳು ಪ್ರಶ್ನಿಸುತ್ತಾಳೆ.

ದಲಿತರ ಮೇಲೆ ನಡೆಯುತ್ತಿರುವ ಹಿಂಸಾಚಾರವನ್ನು ಸಿನಿಮಾ ಏಸ್ತೆಟಿಕ್ಸ್ ಜೊತೆಗೇ ಹೆಣೆದಿರುವ ನಿರ್ದೇಶಕ ಪಾ. ರಂಜಿತ್ ಅವರ ಧೋರಣೆ ಹಾಗೂ ಕೌಶಲಕ್ಕೆ ಅನೇಕರಿಂದ ಶ್ಲಾಘನೆ ವ್ಯಕ್ತವಾಗಿದೆ. ‘ಧಮ್ಮಂ’ ಕಥೆಯಲ್ಲಿನ ಮೇಲಿನ ದೃಶ್ಯವೂ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಅದಕ್ಕೆ ತರಹೇವಾರಿ ಪ್ರತಿಕ್ರಿಯೆಗಳೂ ವ್ಯಕ್ತವಾಗಿವೆ. ಪಾ.ರಂಜಿತ್ ಅವರ ದಲಿತ ಸಂವೇದನೆಯನ್ನು ಮೆಚ್ಚುವ ಅನೇಕರು ಅದರ ಸೂಕ್ಷ್ಮಗಳನ್ನು ತಡವಿ ಚರ್ಚಿಸಿದ್ದರೆ, ತಮಿಳುನಾಡಿನ ಬುದ್ದಿಸ್ಟ್ ಸಂಘ ಕೌನ್ಸಿಲ್ ಚಿತ್ರದ ಆ ದೃಶ್ಯವನ್ನು ಖಂಡಿಸಿದೆ. ಬುದ್ಧನ ಪ್ರತಿಮೆಯ ಮೇಲೆ ನಿಂತು ಆತ ದೇವರಲ್ಲ ಎಂದು ಹೇಳಿದ ಪ್ರಕರಣ ಇದುವರೆಗೆ ನಡೆದೇ ಇಲ್ಲ. ಇದು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದೆ ಎನ್ನುವುದು ಕೌನ್ಸಿಲ್ ಪ್ರತಿಕ್ರಿಯೆ. ಸಾರ್ವಜನಿಕರಲ್ಲಿ ಕ್ಷಮೆಯಾಚಿಸಿ, ಆ ದೃಶ್ಯವನ್ನು ಕಿತ್ತುಹಾಕಬೇಕೆನ್ನುವುದು ಆಗ್ರಹ.

ವಿಡುತಲೈ ಚಿರುತ್ತೈಗಳ್ ಕಚ್ಚಿ (ವಿಸಿಕೆ) ಎಂಬ ಸಂಘಟನೆಯಲ್ಲಿ ತೊಡಗಿಕೊಂಡಿರುವ, ಸ್ವತಃ ಲೇಖಕರೂ ಆದ ಗೌತಮ ಸನ್ನ ಎಂಬುವವರೂ ರಂಜಿತ್ ಅವರ ಈ ದೃಶ್ಯವನ್ನು ಖಂಡಿಸಿ, ಉದ್ದಾನುದ್ದದ ಪೋಸ್ಟ್ ಅನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದಾರೆ. ‘ಬುದ್ಧ ನಾಸ್ತಿಕ ಹೌದಾದರೂ ಅತಿ ವೈಚಾರಿಕತೆಯನ್ನೂ ವಿರೋಧಿಸಿದ್ದವರು. ಅವರೇ ದೇವರಿಲ್ಲ ಎಂದಿದ್ದನ್ನು ಸಾರಲು ಅವರ ಪ್ರತಿಮೆಯ ಮೇಲೆ ವ್ಯಕ್ತಿಯನ್ನು ಏರಿಸಿ ಕೂರಿಸಿ, ವಿಚಾರ ಪ್ರಸ್ತಾಪಿಸುವುದನ್ನು ತೋರಿಸುವ ಅಗತ್ಯವಿರಲಿಲ್ಲ. ಸಾವರ್ಕರ್ ಕೂಡ ನಾಸ್ತಿಕರಾಗಿದ್ದರು. ಆದರೆ, ಅವರ ವಿಚಾರಧಾರೆಯೇ ಬೇರೆಯಾಗಿತ್ತು’ ಎನ್ನುವುದು ಗೌತಮ ಅವರ ವಾದ.

ಮದ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್‌ನ ಡಾ. ಸಿ. ಲಕ್ಷ್ಮಣನ್ ಅವರು ಪಾ. ರಂಜಿತ್ ಬೆಂಬಲಕ್ಕೆ ನಿಂತಿದ್ದಾರೆ. ‘ಕಲಾಮಾಧ್ಯಮದಲ್ಲಿ ಮುರಿದು ಕಟ್ಟುವುದು ಇದ್ದೇ ಇರುತ್ತದೆ. ರಂಜಿತ್ ಮಾಡಿರುವುದು ಅದನ್ನೇ’ ಎನ್ನುವುದು ಅವರ ವಿಶ್ಲೇಷಣೆ.

ಕಾನೂನು ಹೋರಾಟಕ್ಕೆ ಮುಂದಾಗುವುದಾಗಿಯೂ ಕೆಲವು ಬೌದ್ಧ ಧರ್ಮ ಅನುಯಾಯಿಗಳು ಎಚ್ಚರಿಸಿದ್ದಾರೆ. ಪಾ. ರಂಜಿತ್ ಈ ಯಾವುದಕ್ಕೂ ಪ್ರತಿಕ್ರಿಯೆ ನೀಡಿಲ್ಲ. ಅವರ ಚಿತ್ರದ ಕಥೆಯಷ್ಟೇ ಮಾತನಾಡುತ್ತಿದೆ. ■

# ಬಾಯ್ಕಾಟ್! ಇದೆಂಥ ಸಂಸ್ಕೃತಿ?

‘ದೇಶದಲ್ಲೀಗ ಬಾಯ್ಕಾಟ್ ಸಂಸ್ಕೃತಿ ಎದ್ದುಕಾಣುತ್ತಿದೆ’ – ಸಿನಿಮಾ ನಿರ್ದೇಶಕ ಅನುರಾಗ್ ಕಶ್ಯಪ್ ಆಡಿದ ಈ ಮಾತನ್ನೂ ಬಾಯ್ಕಾಟ್ ಮಾಡಿ ಎಂದು ಕೆಲವರು ಕಾಲೆಳೆದಿರುವುದು ಈ ಕಾಲದ ಚೋದ್ಯ. ‘ಬಾಯ್ಕಾಟ್ ಲಾಲ್ ಸಿಂಗ್ ಛಡ್ಡಾ’, ‘ಬಾಯ್ಕಾಟ್ ರಾಖಿ’ ಎಂದೆಲ್ಲ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ನಡೆಯುತ್ತಿರುವ ಈ ಸಂದರ್ಭವನ್ನು ಗಮನಿಸಿ ಅನುರಾಗ್ ‘ಬಾಯ್ಕಾಟ್ ಸಂಸ್ಕೃತಿ’ಯ ಕುರಿತು ಮಾತನಾಡಿದ್ದಾರೆ.

‘ಸುಶಾಂತ್ ಸಿಂಗ್ ರಜಪೂತ್ ಮೃತಪಟ್ಟ ಎರಡು ವರ್ಷಗಳ ನಂತರವೂ ಆ ವಿಷಯವನ್ನು ಕೆದಕಿ ಕೆದಕಿ ಚರ್ಚೆ ನಡೆಸಿದ ದೇಶ ನನ್ನದು. ಎಲ್ಲವನ್ನೂ ನಿಷೇಧಿಸಿ ಎನ್ನುತ್ತಾ ಹೋದರೆ ಯಾವ ಭಿನ್ನ ದನಿಗಳೂ ಕೇಳುವುದೇ ಇಲ್ಲ. ಒಂದು ನಿರ್ದಿಷ್ಟ ಸಮುದಾಯ ಭಿನ್ನ ದನಿಯನ್ನು ಬೆಂಬಲಿಸದೇ ಹೋದರೆ ಗ್ಯಾಂಗ್ಸ್ ಆಫ್ ವಸೇಪುರ್ ರೀತಿಯ ನನ್ನ ಸಿನಿಮಾಗಳನ್ನು ಯಾರೂ ನೋಡುತ್ತಿರಲಿಲ್ಲ’ ಎಂದು ಅನುರಾಗ್ ಹೇಳಿದ್ದಾರೆ. ■

